ಹುಬ್ಬಳ್ಳಿ ವಿದ್ಯುತ್ ಸರಬರಾಜು
ಕಂಪನಿ ನಿಯಮಿತ

(ಕರ್ನಾಟಕ ಸರ್ಕಾರದ ಸಂಪೂರ್ಣ ಸ್ವಾಮ್ಯಕ್ಕೆ ಒಳಪಟ್ಟಿದೆ)

ಕಂಪನಿ ಕಾರ್ಯಾಲಯ,
ನವನಗರ, ಹಳೇ ಪೂ. ಬೆಂ. ರಸ್ತೆ, ಹುಬ್ಬಳ್ಳಿ-580 025.

HUBLI ELECTRICITY SUPPLY
COMPANY LIMITED

(Wholly owned by Govt. of Karnataka undertaking)
Company Office,
Navanagar, Old P. B. Road,
Hubballi-580 025.

Telephone No. : 0836-2223867
E-mail ID : gmadmhr.hescom@gmail.com

Corporate Identity Number (CIN) : U31401KA2002SGC030437

ಸಂಖ್ಯೆ: ಹೆಚ್.ಸಿ.ಓ.-07/ಸಿ-118/2018-19,

ದಿನಾಂಕ: 10 DEC 2020

# ನೇಮಕಾತಿ ಆದೇಶ

**ವಿಷಯ:** ಕಂಪನಿ ಕಾರ್ಯದರ್ಶಿ ಹುದ್ದೆಯ ನೇಮಕಾತಿ ಕುರಿತು.

**ಉಲ್ಲೇಖ:**
1. ಹು.ವಿ.ಸ.ಕಂ.ನಿ. ಉದ್ಯೋಗ ಪ್ರಕಟಣೆ ಸಂಖ್ಯೆ: HCO-07/ C-118/ 2018-19, ದಿನಾಂಕ: 21.10.2019.
2. ಹು.ವಿ.ಸ.ಕಂ.ನಿ. ಮಂಡಳಿ ನಿರ್ದೇಶಕರ ಸಭೆ ದಿನಾಂಕ: 26.02.2020 ರ ನಡಾವಳಿ ವಿಷಯ ಸಂಖ್ಯೆ: 91/ 09.

ಹುಬ್ಬಳ್ಳಿ ವಿದ್ಯುತ್ ಸರಬರಾಜು ಕಂಪನಿ ನಿಯಮಿತದ ಉದ್ಯೋಗ ಪ್ರಕಟಣೆ ಸಂಖ್ಯೆ: HCO-07/ C-118/ 2018-19, ದಿನಾಂಕ: 21.10.2019 ರ ಮೇರೆಗೆ ಮತ್ತು ಹು.ವಿ.ಸ.ಕಂ.ನಿ. ಅಳವಡಿಸಿಕೊಂಡಿರುವ ಹು.ವಿ.ಸ.ಕಂ.ನಿ. ನೌಕರಿ ಭರ್ತಿ ಮತ್ತು ಬಡತಿ ನಿಯಮಗಳನ್ವಯ, ಶ್ರೀ **ರಾಘವೇಂದ್ರ ಕೋಟೆಮನೆ** ಆದ ನೀವು **ಕಂಪನಿ ಕಾರ್ಯದರ್ಶಿ** ಹುದ್ದೆಗೆ ಅರ್ಜಿಯನ್ನು ಸಲ್ಲಿಸಿರುತ್ತೀರಿ.

ಸದರಿ ಅರ್ಜಿಗೆ ಅನುಗುಣವಾಗಿ ಶ್ರೀ **ರಾಘವೇಂದ್ರ ಕೋಟೆಮನೆ** ಆದ ನಿಮ್ಮನ್ನು ವೇತನ ಶ್ರೇಣಿ ರೂ. 61,420-1,700-63,120-1,900-68,820-2,050-79,070-2,370-98,030-2,630-1,03,290 ರಲ್ಲಿ ಈ ಕೆಳಕಂಡ ಷರತ್ತುಗಳನ್ನೊಳಗೊಂಡಂತೆ **ಕಂಪನಿ ಕಾರ್ಯದರ್ಶಿ** ಹುದ್ದೆಗೆ ನೇಮಕಾತಿಗೊಳಿಸಲು ಕಂಪನಿಯು ಹರ್ಷಿಸುತ್ತದೆ. ಅದರನ್ವಯ ತಮ್ಮನ್ನು **ಹು.ವಿ.ಸ.ಕಂ.ನಿ. ಕಂಪನಿ ಕಾರ್ಯಾಲಯ, ಹುಬ್ಬಳ್ಳಿ** ಇಲ್ಲಿಗೆ ತೈನಾತಿಸಲಾಗಿರುತ್ತದೆ.

1. ತಾವು, **ಪ್ರಧಾನ ವ್ಯವಸ್ಥಾಪಕರು [ಆಡಳಿತ ಮತ್ತು ಮಾ.ಸಂ.ಅ.] ಕಂಪನಿ ಕಾರ್ಯಾಲಯ, ಹುಬ್ಬಳ್ಳಿ** ರವರ ಕಛೇರಿಯಲ್ಲಿ **ದಿನಾಂಕ: 31ನೇ ಡಿಸೆಂಬರ್, 2020** ರ ಒಳಗೆ ಕರ್ತವ್ಯಕ್ಕೆ ವರದಿ ಮಾಡಿಕೊಳ್ಳುವುದು. ನಿಗಧಿಪಡಿಸಿದ ದಿನಾಂಕದೊಳಗೆ ತಾವು ಕರ್ತವ್ಯಕ್ಕೆ ವರದಿ ಮಾಡಿಕೊಳ್ಳದೇ ಇದ್ದಲ್ಲಿ, ಕರ್ತವ್ಯಕ್ಕೆ ಹಾಜರಾಗುವ ಸ್ವ-ಇಚ್ಚೆ ತಮಗೆ ಇಲ್ಲವೆಂದು ಭಾವಿಸಿ, ನೇಮಕಾತಿಯು ಯಾವುದೇ ಮುನ್ಸೂಚನೆ ಇಲ್ಲದೇ ತಂತಾನೆ ರದ್ದಾಗುತ್ತದೆ.

2. ಕರ್ತವ್ಯಕ್ಕೆ ವರದಿ ಮಾಡಿಕೊಳ್ಳುವ ಸಮಯದಲ್ಲಿ ತಾವು ಈ ಕೆಳಕಂಡ ಮೂಲ ದಾಖಲಾತಿಗಳನ್ನು ಹಾಗೂ ಅದರ ಸ್ವಯಂ ದೃಢೀಕೃತ ಪ್ರತಿಗಳನ್ನು ಪ್ರಸ್ತುತಪಡಿಸಬೇಕಿರುತ್ತದೆ:
   i) ಎಸ್.ಎಸ್.ಎಲ್.ಸಿ/10ನೇ ತರಗತಿಯ ಅಂಕಪಟ್ಟಿ ಅಥವಾ ಕ್ಯುಮ್ಯುಲೇಟಿವ್ ದಾಖಲೆ (ಜನ್ಮದಿನಾಂಕದ ಪುರಾವೆಗಾಗಿ)
   ii) ಪದವಿ, ಕಾನೂನು, ಐ.ಸಿ.ಎಸ್.ಐ. ಅಂಕಪಟ್ಟಿಗಳು ಮತ್ತು ಪದವಿ, ಕಾನೂನು, ಐ.ಸಿ.ಎಸ್.ಐ. ಪ್ರಮಾಣ ಪತ್ರ.
   iii) ಇನ್ಸ್ ಟಿಟ್ಯೂಟ್ ಆಫ್ ಕಂಪನಿ ಸೆಕ್ರೆಟರೀಸ್ ಆಪ್ ಇಂಡಿಯಾ [ಐ.ಸಿ.ಎಸ್.ಐ..] ಸದಸ್ಯರಾಗಿರುವ ಪ್ರಮಾಣ ಪತ್ರ.
   iv) ಅನುಭವದ ಕುರಿತಾದ ಪ್ರಮಾಣ ಪತ್ರಗಳು.
   v) ಪಾಸ್‌ಪೋರ್ಟ್ ಅಳತೆಯ ಇತ್ತೀಚಿನ ಎರಡು ಭಾವಚಿತ್ರಗಳು.
   vi) ಈ ಹಿಂದೆ ತಾವು ಸರ್ಕಾರಿ/ಅರೆಸರ್ಕಾರಿ ಸಂಸ್ಥೆಯಲ್ಲಿ ಕಾರ್ಯನಿರ್ವಹಿಸುತ್ತಿದ್ದಲ್ಲಿ, ಬಿಡುಗಡೆಗೊಂಡ ಕಾರ್ಯವಿಮುಕ್ತಿ ವರದಿ (Relief Report) ಹಾಗೂ ನಿರಾಕ್ಷೇಪಣಾ ಪತ್ರ (No Objection Certificate).
   vii) ಸಹಾಯಕ ಶಸ್ತ್ರಚಿಕಿತ್ಸಕರ ಹುದ್ದೆಗಿಂತ ಕಡಿಮೆ ಇಲ್ಲದ ಸರ್ಕಾರಿ ವೈದ್ಯಾಧಿಕಾರಿಗಳಿಂದ ಪಡೆದ ವೈದ್ಯಕೀಯ ಪ್ರಮಾಣ ಪತ್ರ.

(ಮು.ತಿ.ನೋ.)

ಮೇಲ್ಕಂಡ ಮೂಲ ದಾಖಲಾತಿಗಳನ್ನು ಸಲ್ಲಿಸದಿದ್ದಲ್ಲಿ, ಕರ್ತವ್ಯಕ್ಕೆ ವರದಿ ಮಾಡಿಕೊಳ್ಳಲು ಅವಕಾಶವಿರುವುದಿಲ್ಲ ಹಾಗೂ ನೇಮಕಾತಿಯು ತಂತಾನೆ ವಜಾಗೊಂಡಂತಾಗುತ್ತದೆ.

3. **ಅನುಬಂಧದಲ್ಲಿ** ತಿಳಿಸಿರುವಂತೆ, ಕರ್ತವ್ಯಕ್ಕೆ ವರದಿ ಮಾಡಿಕೊಳ್ಳುವ ಸಮಯದಲ್ಲಿ ರೂ.200/- ಗಳ ಛಾಪಾ ಕಾಗದದ ಮೇಲೆ ಒಪ್ಪಿಗೆ ಪತ್ರವನ್ನು ಸಲ್ಲಿಸತಕ್ಕದ್ದು.

4. ತಾವು ನಿಗಮದ ಸೇವೆಯನ್ನು ಕರ್ತವ್ಯಕ್ಕೆ ಹಾಜರಾದ ದಿನಾಂಕದಿಂದ ಕಡ್ಡಾಯವಾಗಿ ಐದು [5] ವರ್ಷಗಳ ಅವಧಿಗೆ ನಿರ್ವಹಿಸಬೇಕು.

5. ಹು.ವಿ.ಸ.ಕಂ.ನಿ. ಯ ನೌಕರಿ ಭರ್ತಿ ಮತ್ತು ಬಡತಿ ನಿಯಮಗಳನ್ವಯ ತಾವು ಪ್ರಾರಂಭದಲ್ಲಿ **ಒಂದು ವರ್ಷದ** ಪರೀಕ್ಷಾರ್ಥ ಅವಧಿಯಲ್ಲಿರಬೇಕಾಗುತ್ತದೆ.

6. ಐದು [5] ವರ್ಷಗಳ ಕಡ್ಡಾಯ ಸೇವಾ ಅವಧಿಯ ನಂತರ ತಾವು ನಿಗಮದ ಸೇವೆಯನ್ನು ಸ್ವಂತ ಕಾರಣಗಳಿಂದ ಬಿಡಲು ಬಯಸಿದಲ್ಲಿ ಒಂದು ತಿಂಗಳ ಮುಂಚಿತವಾಗಿ ಸೂಚನೆಯನ್ನು ನೀಡತಕ್ಕದ್ದು ಅಥವಾ ಒಂದು ತಿಂಗಳ ವೇತನವನ್ನು ಪಾವತಿಸಬೇಕಾಗಿರುತ್ತದೆ.

7. ಪರೀಕ್ಷಾರ್ಥ ಅವಧಿಯನ್ನು ತೃಪ್ತಿಕರವಾಗಿ ಪೂರೈಸಲು:

   i) ಹು.ವಿ.ಸ.ಕಂ.ನಿ./ ಕ.ವಿ.ಪ್ರ.ನಿ.ನಿ. ಯಿಂದ ನಡೆಸುವ ಕನ್ನಡ ಭಾಷಾ ಪರೀಕ್ಷೆಗಳನ್ನು ಉತ್ತೀರ್ಣರಾಗತಕ್ಕದ್ದು.

   ii) ಒಳ್ಳೆಯ ನಡತೆ, ಹಾಜರಾತಿಯಲ್ಲಿ ಕಾಲನಿಷ್ಠೆ ಮತ್ತು ಕೆಲಸಗಳನ್ನು ಕಲಿಯುವ ಅಭಿರುಚಿ ಹೊಂದಿರತಕ್ಕದ್ದು ಮತ್ತು ಇವುಗಳನ್ನು ತಮ್ಮ ಮೇಲಾಧಿಕಾರಿಗಳು ನಿರ್ಧರಿಸಿ ವರದಿ ಸಲ್ಲಿಸತಕ್ಕದ್ದು.

   iii) ಹು.ವಿ.ಸ.ಕಂ.ನಿ.ಯಲ್ಲಿ. ಬಳಕೆಯಲ್ಲಿರುವ ಕನಿಷ್ಠ ಎರಡು ಕಂಪ್ಯೂಟರ್ ಸಾಫ್ಟವೇರ್/ ಪ್ಯಾಕೇಜ್ ಗಳ ಜ್ಞಾನವಿರಬೇಕು ಅಥವಾ ನೇಮಕಾತಿ ಹೊಂದಿದ ದಿನಾಂಕದಿಂದ ಮೂರು ತಿಂಗಳ ಒಳಗಾಗಿ ಈ ಪ್ಯಾಕೇಜ್ ಗಳನ್ನು ತಮ್ಮ ಸ್ವಂತ ಖರ್ಚಿನಲ್ಲಿಯೇ ಕಲಿಯತಕ್ಕದ್ದು.

8. ಕಂಪನಿಯಲ್ಲಿ ಹಾಲಿ ಚಾಲ್ತಿಯಲ್ಲಿರುವ ಹಾಗೂ ಜ್ಯೇಷ್ಠತಾ ವಿಷಯಕ್ಕೆ ಸಂಬಂಧಿಸಿದಂತೆ ಕಾಲಕಾಲಕ್ಕೆ ರೂಪಿಸಲಾಗುವ ನಿಯಮಗಳಿಗೆ ಹಾಗೂ ಕರ್ನಾಟಕ ಸಾರ್ವಜನಿಕ ಉದ್ಯೋಗ (ಹೈದ್ರಾಬಾದ್ ಕರ್ನಾಟಕ ಪ್ರದೇಶಕ್ಕೆ ನೇಮಕಾತಿಯಲ್ಲಿ ಮೀಸಲಾತಿ) ಆದೇಶ 2013 ಹಾಗೂ ಅದರಡಿಯಲ್ಲಿ ಹೊರಡಿಸಲಾಗುವ ನಿಯಮಗಳಿಗೆ ಸೇವಾ ಜ್ಯೇಷ್ಠತೆಯು ಒಳಪಟ್ಟಿರುತ್ತದೆ ಮತ್ತು ಸದರಿ ವಿಷಯದಲ್ಲಿ ಸರ್ಕಾರದಿಂದ ಹೊರಡಿಸಲಾಗುವ ನಿಯಮಗಳಿಗೆ ಒಳಪಟ್ಟಿರುತ್ತದೆ. ಮುಂದುವರೆದು ಜ್ಯೇಷ್ಠತಾ ವಿಷಯದಲ್ಲಿ ಮಾನ್ಯ ನ್ಯಾಯಾಲಯದಲ್ಲಿ ಬಾಕಿ ಇರುವ ಪ್ರಕರಣಗಳ ಆದೇಶಕ್ಕೆ ಒಳಪಟ್ಟಿರುತ್ತದೆ.

9. ನಿಗದಿತ ಸಮಯದೊಳಗೆ ಪರೀಕ್ಷಾರ್ಥ ಅವಧಿಯನ್ನು ತೃಪ್ತಿಕರವಾಗಿ ಪೂರೈಸದಿದ್ದ ಪಕ್ಷದಲ್ಲಿ, ಯಾವುದೇ ಸೂಚನೆಯನ್ನು ನೀಡದೆ ತಮ್ಮ ನೇಮಕಾತಿಯನ್ನು ರದ್ದುಗೊಳಿಸಲಾಗುವುದು. ಮುಂದುವರೆದು ಪರೀಕ್ಷಾರ್ಥ ಅವಧಿಯಲ್ಲಿ ತಮ್ಮ ಸೇವೆಯು ತೃಪ್ತಿಕರವಾಗಿಲ್ಲವೆಂದು ಕಂಡುಬಂದಲ್ಲಿ, ಯಾವುದೇ ಸಮಯದಲ್ಲಿ ತಮ್ಮನ್ನು ಸೇವೆಯಿಂದ ವಜಾ ಮಾಡುವ ಹಕ್ಕನ್ನು ಹು.ವಿ.ಸ.ಕಂ.ನಿ.ಯು ಹೊಂದಿರುತ್ತದೆ.

10. ಪರೀಕ್ಷಾರ್ಥ ಅವಧಿಯಲ್ಲಿ ತಾವು ಯಾವ ಹುದ್ದೆಗೆ ನೇಮಕಾತಿಯಾಗಿರುತ್ತೀರೋ ಆ ಹುದ್ದೆಯ ವೇತನ ಶ್ರೇಣಿಯಲ್ಲಿ ಕನಿಷ್ಠ ವೇತನಕ್ಕೆ ಹಕ್ಕುಳ್ಳವರಾಗಿರುತ್ತೀರಿ. ಸಕ್ಷಮ ಪ್ರಾಧಿಕಾರದಿಂದ ಅರ್ಹತಾ ಪರೀಕ್ಷಣೆಯು ತೃಪ್ತಿಕರವಾಗಿ ಪೂರ್ಣಗೊಂಡಿರುವುದಾಗಿ ಘೋಷಣೆಯಾದ ನಂತರ ಅರ್ಹತಾ ಪರೀಕ್ಷಣೆಯು ತೃಪ್ತಿಕರವಾಗಿ ಪೂರ್ಣಗೊಂಡ ದಿನಾಂಕದಿಂದ ನೇಮಕಾತಿ ಹೊಂದಿದ ಹುದ್ದೆಯ ಕಾಲವೇತನ ಶ್ರೇಣಿಯಲ್ಲಿ ಸಾಮಾನ್ಯ ವೇತನ ಹೆಚ್ಚಳವನ್ನು ಗಳಿಸಲು ಹಕ್ಕುಳ್ಳವರಾಗಿರುತ್ತೀರಿ.

(ಪು.ತಿ.ನೋ.)

11. ಈ ನೇಮಕಾತಿ ಹಾಗೂ ತಮ್ಮ ಸೇವೆಯ ಮುಂದುವರಿಕೆಯು ಹು.ವಿ.ಸ.ಕಂ.ನಿ.ಯು ಅಳವಡಿಸಿರುವ ಕವಿಮಂ ನೌಕರರ ಸೇವಾ ನಿಯಮಗಳು (ಪಿಂಚಣಿ ನಿಯಮಗಳನ್ನು ಹೊರತುಪಡಿಸಿ), ಕವಿಮಂ ನೌಕರಿ ಭರ್ತಿ ಮತ್ತು ಬಡತಿ ನಿಯಮಗಳು, ನೌಕರರ (ಅರ್ಹತಾ ಪರೀಕ್ಷಣೆ) ನಿಯಮಗಳು ಮತ್ತು ನೌಕರರ (ಜ್ಯೇಷ್ಠತಾ) ನಿಯಮಗಳು, ಕವಿಮಂ ನೌಕರರ (ವರ್ಗೀಕರಣ, ಶಿಸ್ತು ನಿಯಂತ್ರಣ ಹಾಗೂ ಮೇಲ್ಮನವಿ) ನಿಬಂಧನೆಗಳು, 1987 ಹಾಗೂ ಕವಿಮಂ ನೌಕರರ ಸೇವಾ (ನಡತೆ) ನಿಯಮಗಳು, 1988 ಹಾಗೂ ಕಾಲಕಾಲಕ್ಕೆ ಹೊರಡಿಸಲಾಗುವ ತಿದ್ದುಪಡಿ ಮತ್ತು ಕಾಲಕಾಲಕ್ಕೆ ರೂಪಿಸಲಾಗುವ ನಿಯಮ ಹಾಗೂ ನಿಬಂಧನೆಗಳಿಗೆ ಒಳಪಟ್ಟಿರುತ್ತದೆ.

12. ಹು.ವಿ.ಸ.ಕಂ.ನಿ. ಅಳವಡಿಸಿಕೊಂಡಿರುವ ಕವಿಮಂ ನೌಕರಿ ಭರ್ತಿ ಮತ್ತು ಬಡತಿ ನಿಯಮಗಳ ಅಧ್ಯಾಯ-1 ರ ಕ್ರಮ ಸಂಖ್ಯೆ: 6ಎ(vi) ರ ಅನ್ವಯ ತಾವು ನಿಗಮದ ಸೇವೆಗೆ ಸೇರ್ಪಡೆಯಾದ ನಂತರ ಯಾವ ಪರಿಸ್ಥಿತಿಯಲ್ಲೂ **'ಉಚಿತ ವಿದ್ಯುತ್ ಸರಬರಾಜು'** ಸೌಲಭ್ಯಕ್ಕೆ ಹಕ್ಕುಳ್ಳವರಾಗಿರುವುದಿಲ್ಲ.

13. ಕವಿಪ್ರನಿನಿ ಆದೇಶ ಸಂಖ್ಯೆ: ಕವಿಪ್ರನಿನಿ /ಬಿ16/ ಬಿ14/ 4977/ 2005-06, ದಿನಾಂಕ: 05.07.2007 ರ ಅನ್ವಯ ಹಾಗೂ ಸದರಿ ವಿಷಯದಲ್ಲಿ ಹೊರಡಿಸಲಾಗಿರುವ ಆದೇಶ/ ಸುತ್ತೋಲೆಗಳನುಸಾರ ತಾವು ಹೊಸದಾಗಿ ವ್ಯಾಖ್ಯಾನಿಸಿದ ಅಂಶದಾಯಿ ಕೊಡುಗೆ ವಿಶ್ರಾಂತಿ ಯೋಜನೆ ವ್ಯಾಪ್ತಿಗೆ (New Defined Contributory Pension Scheme) ಒಳಪಟ್ಟಿರುತ್ತೀರಿ.

14. ತಾವು ಕೆಲಸವನ್ನು ಪಡೆಯಲು ಸಲ್ಲಿಸಿರುವ ಯಾವುದೇ ದಾಖಲೆ/ ಮಾಹಿತಿಗಳು ನಕಲಿ/ ತಪ್ಪು/ ಸುಳ್ಳು ಎಂದಾಗಲೀ ಅಥವಾ ತಮ್ಮ ವಿರುದ್ಧ ಯಾವುದೇ ರೀತಿಯ ಕ್ರಿಮಿನಲ್ ಮೊಕದ್ದಮೆ ದಾಖಲಾಗಿರುವುದು ಯಾವುದೇ ಸಂದರ್ಭದಲ್ಲಿ ಕಂಡುಬಂದಲ್ಲಿ ತಮ್ಮನ್ನು ಸೇವೆಯಿಂದ ವಜಾ ಮಾಡಲಾಗುವುದು ಹಾಗೂ ತಮ್ಮ ವಿರುದ್ಧ ಸೂಕ್ತ ಶಿಸ್ತುಕ್ರಮ/ ಕಾನೂನು ಕ್ರಮವನ್ನು ಜರುಗಿಸಲಾಗುವುದು.

15. ನೀವು ಹು.ವಿ.ಸ.ಕಂ.ನಿ. ವ್ಯಾಪ್ತಿಯಲ್ಲಿನ ಕಛೇರಿಗಳಲ್ಲಿ ಕೆಲಸ ನಿರ್ವಹಿಸಬೇಕಾಗಿರುತ್ತದೆ. ಹು.ವಿ.ಸ.ಕಂ.ನಿ. ವ್ಯಾಪ್ತಿಯನ್ನು ಹೊರತುಪಡಿಸಿ, ಕ.ವಿ.ಪ್ರ.ನಿ.ನಿ. ಹಾಗೂ ವಿವಿಧ ವಿದ್ಯುತ್ ಸರಬರಾಜು ಕಂಪನಿಗಳಿಗೆ ವರ್ಗಾವಣೆಗೊಳಿಸಲಾಗುವುದಿಲ್ಲ.

10/12/20

ಪ್ರಧಾನ ವ್ಯವಸ್ಥಾಪಕರು
[ಆಡಳಿತ ಮತ್ತು ಮಾ.ಸಂ.ಅ.]
ಹು.ವಿ.ಸ.ಕಂ.ನಿ., ಹುಬ್ಬಳ್ಳಿ.

ಗೆ,

ಶ್ರೀ ರಾಘವೇಂದ್ರ ಕೋಟೆಮನೆ,
ತಂದೆ: ಶ್ರೀ ರಾಮನಾಥ,
ಕಟ್ಟಿಗೆ ಪೋ: ದೇಹಳ್ಳಿ,
ತಾ: ಯಲ್ಲಾಪುರ,
ಉತ್ತರ ಕನ್ನಡ ಜಿಲ್ಲೆ - 581 359.

ಪ್ರತಿಯನ್ನು:

1. ನಿರ್ದೇಶಕರು [ಆ. ಮತ್ತು ಮಾ.ಸಂ.], ನಿಗಮ ಕಛೇರಿ, ಕವಿಪ್ರನಿನಿ, ಕಾವೇರಿ ಭವನ, ಬೆಂಗಳೂರು.
2. ಆರ್ಥಿಕ ಸಲಹೆಗಾರರು, ಕವಿಪ್ರನಿನಿ ಮತ್ತು ಎಸ್ಕಾಂ ಪಿ. & ಜಿ. ಟ್ರಸ್ಟ್, ಕಾವೇರಿ ಭವನ, ಬೆಂಗಳೂರು.
3. ಆರ್ಥಿಕ ಸಲಹೆಗಾರರು [ಆಂತರಿ ಪರಿಶೋಧನೆ], ಕಂಪನಿ ಕಾರ್ಯಾಲಯ, ಹು.ವಿ.ಸ.ಕಂ.ನಿ., ಹುಬ್ಬಳ್ಳಿ.
4. ಮುಖ್ಯ ಇಂಜಿನೀಯರ [ವಿದ್ಯುತ್], ಹುಬ್ಬಳ್ಳಿ/ ಬೆಳಗಾವಿ ವಲಯ, ಹು.ವಿ.ಸ.ಕಂ.ನಿ., ಹುಬ್ಬಳ್ಳಿ/ಬೆಳಗಾವಿ.
5. ಬೆ.ವಿ.ಸ.ಕಂ.ನಿ. ಕಂಪನಿ ಕಾರ್ಯದರ್ಶಿಗಳು ಮತ್ತು ಹು.ವಿ.ಸ.ಕಂ.ನಿ. ಮಂಡಳಿಯ ಅಧಿಕೃತ ಸಹಿಗಾರರು, ಕಂಪನಿ ಕಾರ್ಯಾಲಯ, ಬೆ.ವಿ.ಸ.ಕಂ.ನಿ., ಕೆ. ಆರ್. ವೃತ್ತ, ಬೆಂಗಳೂರು.

(ಮು.ಪಿ.ನೋ.)

6. ಪ್ರಧಾನ ವ್ಯವಸ್ಥಾಕರು [ತಾಂತ್ರಿಕ], ಕಂಪನಿ ಕಾರ್ಯಾಲಯ, ಹು.ವಿ.ಸ.ಕಂ.ನಿ., ಹುಬ್ಬಳ್ಳಿ.
7. ಎಲ್ಲಾ ಅಧೀಕ್ಷಕ ಇಂಜನೀಯರ [ವಿದ್ಯುತ್], ಕಾರ್ಯ ಮತ್ತು ಪಾಲನೆ ವೃತ್ತ, ಹು.ವಿ.ಸ.ಕಂ.ನಿ., ಹುಬ್ಬಳ್ಳಿ/ ಶಿರಸಿ/ ಹಾವೇರಿ/ ಬೆಳಗಾವಿ/ ವಿಜಯಪುರ/ ಬಾಗಲಕೋಟೆ/ ಚಿಕ್ಕೋಡಿ.
8. ಅಧೀಕ್ಷಕ ಇಂಜನೀಯರ [ವಿದ್ಯುತ್] [ಟಿ ಮತ್ತು ಪಿ]/ [ಪಿ.ಎಮ್.ಸಿ.]/ [ಐ.ಟಿ. ಮತ್ತು ಎಮ್.ಟಿ], ಕಂಪನಿ ಕಾರ್ಯಾಲಯ, ಹು.ವಿ.ಸ.ಕಂ.ನಿ., ಹುಬ್ಬಳ್ಳಿ.
9. ಲೆಕ್ಕನಿಯಂತ್ರಣಾಧಿಕಾರಿ [ಲೆಕ್ಕಗಳು ಮತ್ತು ಕಂದಾಯ], ಕಂಪನಿ ಕಾರ್ಯಾಲಯ, ಹು.ವಿ.ಸ.ಕಂ.ನಿ., ಹುಬ್ಬಳ್ಳಿ.
10. ಉಪ ಲೆಕ್ಕನಿಯಂತ್ರಣಾಧಿಕಾರಿ [ಲೆಕ್ಕಗಳು/ ಕಂದಾಯ/ ಹಣಕಾಸು/ ಜಿ.ಎಸ್.ಟಿ.], ಕಂಪನಿ ಕಾರ್ಯಾಲಯ, ಹು.ವಿ.ಸ.ಕಂ.ನಿ., ಹುಬ್ಬಳ್ಳಿ.
11. ಹಿರಿಯ ಆಪ್ತ ಕಾರ್ಯದರ್ಶಿಗಳು [ವ್ಯವಸ್ಥಾಪಕ ನಿರ್ದೇಶಕರು], ಕ.ವಿ.ಪ್ರ.ನಿ.ನಿ/ ಬೆ.ವಿ.ಸ.ಕಂ.ನಿ/ ಮಂ.ವಿ.ಸ.ಕಂ./ ಚಾ.ವಿ.ಸ.ನಿ.ನಿ./ ಗು.ವಿ.ಸ.ಕಂ.ನಿ. – ಮಾಹಿತಿಗಾಗಿ ಮತ್ತು ಮಾನ್ಯರ ಅಧ್ಯ ಗಮನಕ್ಕೆ ತರಲು ಕೋರಿದೆ.
12. ಹಿರಿಯ ಆಪ್ತ ಕಾರ್ಯದರ್ಶಿಗಳು [ವ್ಯವಸ್ಥಾಪಕ ನಿರ್ದೇಶಕರು/ ನಿರ್ದೇಶಕರು (ತಾಂತ್ರಿಕ)], ಕಂಪನಿ ಕಾರ್ಯಾಲಯ, ಹು.ವಿ.ಸ.ಕಂ.ನಿ., ಹುಬ್ಬಳ್ಳಿ. – ಮಾಹಿತಿಗಾಗಿ ಮತ್ತು ಮಾನ್ಯರ ಅಧ್ಯ ಗಮನಕ್ಕೆ ತರಲು ಕೋರಿದೆ.
13. ಆಪ್ತ ಕಾರ್ಯದರ್ಶಿಗಳು [ಮುಖ್ಯ ಆರ್ಥಿಕ ಅಧಿಕಾರಿ], ಕಂಪನಿ ಕಾರ್ಯಾಲಯ, ಹು.ವಿ.ಸ.ಕಂ.ನಿ., ಹುಬ್ಬಳ್ಳಿ. – ಮಾಹಿತಿಗಾಗಿ ಮತ್ತು ಮಾನ್ಯರ ಗಮನಕ್ಕೆ ತರಲು ಕೋರಿದೆ.
14. ಲೆಕ್ಕಾಧಿಕಾರಿ [ಆಂತರಿಕ ನಿರ್ವಹಣೆ/ ಸಿಬ್ಬಂದಿ], ಕಂಪನಿ ಕಾರ್ಯಾಲಯ, ಹು.ವಿ.ಸ.ಕಂ.ನಿ., ಹುಬ್ಬಳ್ಳಿ.
15. ಕಛೇರಿ ಕಡತ/ ಮಹಾ ಕಡತ.